**O.S.32-21** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಹೆಚ್ ಕೆ, ವಕೀಲರಿಂದಃ**

5. ನಮ್ಮ ತಂದೆ ಸಾಯುವದಕ್ಕಿಂತ ಮುಂಚೆ 6 ತಿಂಗಳಿಗೆ ಮಾತ್ರ ಆರೋಗ್ಯ ಚೆನ್ನಾಗಿರಲಿಲ್ಲ. ಅವರಿಗೆ ಬಿ ಪಿ ಹಾಗೂ ಶುಗರ ರೋಗಗಳು ಇದ್ದವು ಅಂದರೆ ಸರಿಯಲ್ಲ. ನಮ್ಮ ತಂದೆ ಎಲ್ಲಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಗೊತ್ತಿಲ್ಲ. ನಮ್ಮ ತಂದೆಗೆ ಓದಲು-ಬರೆಯಲು ಬರುತ್ತಿತ್ತು. ನಮ್ಮ ತಾಯಿ ಅನಕ್ಷರಸ್ಥಳು ಅಂದರೆ ಸರಿ. ರಾಮನಗೌಡ ನನಗಿಂತ ದೊಡ್ಡವರು. ನಮ್ಮ ತಂದೆಗೆ ವಯಸ್ಸಾಗಿ ಮರಣ ಹೊಂದಿರುತ್ತಾರೆ, ಅವರಿಗೆ ಅಂತಹ ಪರಿ ವಯಸ್ಸಾಗಿರಲಿಲ್ಲವೆಂದು ಹೇಳುತ್ತಾರೆ. ಅವರಿಗೆ 58-60 ವರ್ಷಗಳಾಗಿರಬಹುದು. ನಮ್ಮ ತಂದೆಗೆ ವಯಸ್ಸಾಗಿದ್ದರಿಂದ ರಾಮನಗೌಡ ಹಿರಿಯಮಗನಾಗಿದ್ದರಿಂದ ಮನೆತನದ ಹಿರಿತನವನ್ನು ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. ಈಗ ಸಾಕ್ಷಿಗೆ ನಲವಡಿ ಗ್ರಾಮದ ವರದಿ ದಿಃ 8.5.1991 ರ ಕಬೂಲಿ ವರದಿ ದೃಢೀಕೃತ ಪ್ರತಿ ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಕ್ರಮಸಂಖ್ಯೆಃ -2 ನನ್ನ ಸಹಿ ಇದೆ. ಈಗ ಸಾಕ್ಷಿಗೆ ದೃಢೀಕೃತ ನೋಟಿಸ ಪ್ರತಿ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ನೋಟಿಸನ್ನು ನಿಡಿ.2 ಎಂದು ಗುರುತಿಸಲಾಯಿತು. ಈಗ ದಿಃ 5.8.1991 ರಂದು ಆದ ಶಿರಗುಪ್ಪಿ ಗ್ರಾಮದ ಕಬೂಲಿ ವರದಿಯ ದೃಢೀಕೃತ ಪ್ರತಿ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನೋಟಿಸಿನ ದೃಢಿಕೃತ ಪ್ರತಿ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ನೋಟಿಸಿನ ದೃಢೀಕೃತ ನೋಟಿಸನ್ನು ನಿಡಿ.4 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಲವಡಿ ಗ್ರಾಮದ ನಮೂನೆ -12, ಡ ನಂಃ 2603 ನ್ನು ತೋರಿಸಲಾಗಿ ನಲವಡಿ ಗ್ರಾಮದ ಸ ನಂಃ 191, 199, 333 ಹಾಗೂ 190 ಪೈಕಿ ಎಂದು ಇದೆ ಎಂದು ಹೇಳುತ್ತಾರೆ. ಸದರಿ ಡ ನಂಃ ದೃಢೀಕೃತ ಪ್ರತಿಯನ್ನು ನಿಡಿ.5 ಎಂದು ಗುರುತಿಸಲಾಯಿತು. ಈಗ ಶಿರಗುಪ್ಪಿ ಗ್ರಾಮದ ದೃಢೀಕೃತ ಡ ನಂಬರ ತೋರಿಸಲಾಗಿ ಅದರಲ್ಲಿ ಸ ನಂಃ 266 ಎಂದು ಗುರುತಿಸಿದ್ದು, ಡ ನಂಃ 5478 ಇದ್ದು ಸದರಿ ದಾಖಲೆಯನ್ನು ನಿಡಿ.6 ಎಂದು ಗುರುತಿಸಲಾಯಿತು.

ನಿಡಿ.1 ರಲ್ಲಿ ಪ್ರತಿವಾದಿ 2 ಹಾಗೂ 3 ಮೃತ ತಾಯಿ ಸಹಿ ಮಾಡಿರುತ್ತಾರೆ ಅಂದರೆ ಸರಿ. ನಿಡಿ.2 ರಲ್ಲಿರುವ ತಮ್ಮ ತಂಗಿಯರ ಸಹಿ ಗೊತ್ತಿಲ್ಲ. ನಮ್ಮ ತಾಯಿ ಸಹಿ ಗೊತ್ತಿಲ್ಲ. ಸಾಕ್ಷಿಗೆ ನಿಡಿ.3 ನ್ನು ತೋರಿಸಿದಾಗ ನಮ್ಮ ತಂಗಿ ಇಂಗ್ಲೀಷದಲ್ಲಿ ಸಹಿ ಮಾಡುತ್ತಾರೆಂದು ಹೇಳುತ್ತಾರೆ. ನನ್ನ ತಾಯಿ ದಿಃ 2.10.2006 ರಲ್ಲಿ ಮರಣ ಹೊಂದಿರುತ್ತಾರೆ. 1982 ರಲ್ಲಿ ನನ್ನ ಮದುವೆಯಾಗಿದೆ. ನನ್ನ ತಂಗಿ ನಿರ್ಮಲಾ ರವರ ಮದುವೆ ಯಾವಾಗ ಆಗಿದೆ ಗೊತ್ತಿಲ್ಲ. ನಿರ್ಮಲಾ ರವರ ಮದುವೆ 1986 ರಲ್ಲಿ ಆಗಿದೆ ಅಂದರೆ ಗೊತ್ತಿಲ್ಲ. ನನ್ನ ಮದುವೆಯಾಗಿ 5-6 ವರ್ಷಗಳ ನಂತರ ಲಕ್ಷ್ಮವ್ವಳ ಮದುವೆಯಾಗಿದೆ. ನನ್ನ ಮದುವೆಯಾಗಿ 6-7 ವರ್ಷಗಳ ನಂತರ ರಾಮನಗೌಡ ಮದುವೆಯಾಗಿದೆ. 3 ಜನ ಹೆಣ್ಣು ಮಕ್ಕಳ ಮದುವೆಯಾದ ನಂತರ ರಾಮನಗೌಡನ ಮದುವೆಯಾಗಿದೆ ಅಂದರೆ ಸರಿ. ಕೃಷ್ಣೆಗೌಡ ಮರಣ ಹೊಂದುವಗಿಂತ ಮುಂಚೆ ರಾಮನಗೌಡ ಮನೆ ವ್ಯವಹಾರ ಮಾಡುತ್ತಿದ್ದನೆಂದರೆ ನಮ್ಮ ತಂದೆ ಮಾಡುತ್ತಿದ್ದ ಎಂದು ಹೇಳುತ್ತಾರೆ. ನಮ್ಮ ತಂದೆಗೆ ಕಣ್ಣು ಕಾಣದ ಕಾರಣ ರಾಮನಗೌಡ ಮನೆ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಅಂದರೆ ಸರಿಯಲ್ಲ. ನಮ್ಮ ಎಲ್ಲರ ಮದುವೆಯನ್ನು ರಾಮನಗೌಡ ಮಾಡಿರುತ್ತಾನೆ ಅಂದರೆ ಸರಿಯಲ್ಲ. ನಮ್ಮ ತಂದೆ ಮಾಡಿರುತ್ತಾರೆ. ನಮ್ಮ ತಂದೆ ಮರಣ ಹೊಂದಿದ ನಂತರ 1992 ರಲ್ಲಿ ರಾಮನಗೌಡ ಮದುವೆಯಾಗಿರುತ್ತಾನೆ ಅಂದರೆ ಸರಿ. ನಮ್ಮ 3 ಜನರನ್ನು ಒಳ್ಳೆಯ ಮನೆಗೆ ಮದುವೆ ಮಾಡಿದ ನಂತರ ರಾಮನಗೌಡ ಮದುವೆಯಾಗಿದ್ದಾನೆ ಅಂದರೆ ಸರಿ. ಮದುವೆಯಾದ ಕಾಲಕ್ಕೆ 3 ಜನರಿಗೆ ಕೊಡಬೇಕಾಗಿದ್ದ ಎಲ್ಲವನ್ನು ಕೊಟ್ಟು ಮದುವೆ ಮಾಡಿರುತ್ತಾನೆ ಅಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದರು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.